ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/04/2023-24. ಕಾಲೇಜುಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು,ದಿನಾಂಕ:14.09.2023.

ಇವರಿಗೆ.
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
ಮಾನ್ಯರೇ,

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಆಗಸ್ಟ್-2023ರ ಮಾಹೆಗೆ ಆವಶ್ಯಕವಾಗಿರುವ ಗೌರವಧನದ ಮಾಹಿತಿ ಹಾಗೂ ಉಳಿಕೆಯಾಗಿರುವ ಅನುದಾನದ ಮಾಹಿತಿಯನ್ನು ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/18ಡಿಸಿಇ2023, ದಿನಾಂಕ:27.01.2023.
2.ಪತ್ರ ಸಂಖ್ಯೆ:
ಕಾಶಿಇ/ನೇವಿ-1/ಅಉಅ/315/2022-23, ದಿನಾಂಕ:28.01.2023.
3.ಈ ಕಛೇರಿಯ ಅನುದಾನದ ಬಿಡುಗಡೆಯ ಆದೇಶದ ಸಂಖ್ಯೆ: ಕಾಶಿಇ/ಆಯವ್ಯಯ /ಅ.ಉ.ಗೌ/ಅ.ಬಿ/04/2023-24, ದಿನಾಂಕ:25.04.2023, ದಿ:03.06.2023, ದಿ:23.06.2023 ಮತ್ತು ದಿನಾಂಕ:04.08.2023.

* * * * * * *

ಪ್ರಸ್ತಾಪಿತ ವಿಷಯ ಹಾಗೂ ಉಲ್ಲೇಖ-1&2ಕ್ಕೆ ಸಂಬಂಧಿಸಿದಂತೆ ಕಾಲೇಜು ಇಲಾಖಾ ವ್ಯಾಪ್ತಿಯಡಿಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡು 2023-24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾರ್ಚ್-2023 ರಿಂದ ಜುಲೈ-2023ರ ಮಾಹೆಗಳಿಗೆ ಉಲ್ಲೇಖ(3)ರ ಪತ್ರಗಳಲ್ಲಿ ವಿವಿಧ ದಿನಾಂಕಗಳಂದು ಗೌರವಧನವನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ತಮ್ಮ ವ್ಯಾಪ್ತಿಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ನಿಗಧಿಪಡಿಸಿರುವ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಕೊನೆಯ ಕರ್ತವ್ಯದ ಅವಧಿಯವರೆಗೆ(Last working Day) ಗೌರವಧನವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲು ಸೂಚಿಸಲಾಗಿತ್ತು ಹಾಗೂ ಉಳಿಕೆ ಅನುದಾನಕ್ಕೆ ನಿಗಧಿತ ಅವಧಿಯಲ್ಲಿ ಬಳಸಿಕೊಂಡು ಬಳಕೆಪ್ರಮಾಣಪತ್ರವನ್ನು ಇ-ಮೇಲ್ ವಿಳಾಸ dcegfbudget@gmail.com ಕ್ಕೆ ಎಕ್ಸೆಲ್ ಫಾರ್ಮೆಟ್‌ನಲ್ಲಿ ದಿನಾಂಕ:16.08.2023ರೊಳಗೆ ಕಳುಹಿಸಿಕೊಡಲು ಸೂಚಿಸಲಾಗಿರುತ್ತದೆ. ಆದರೂ ಇದುವರೆವಿಗೂ ಕೆಲವು ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಹಂತದಲ್ಲಿ ಅನುದಾನವನ್ನು ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಈ ಕೂಡಲೇ ಅನುದಾನವನ್ನು ಬಳಸಿಕೊಂಡು ಬಳಕೆಪ್ರಮಾಣಪತ್ರವನ್ನು ಸಲ್ಲಿಸಲು ಸೂಚಿಸಲಾಗಿದೆ ಹಾಗೂ ಪ್ರಾಂಶುಪಾಲರ ಕೆ-2ರಲ್ಲಿ ಉಳಿಕೆಯಾಗಿರುವ ಅನುದಾನವನ್ನು ವಾಪಸ್ಸು ಸೆಳೆಯಲಾಗುವುದು.

ಮುಂದುವರೆದು ಆಗಸ್ಟ್-2023ರ ಮಾಹೆಗೆ ಗೌರವಧನವನ್ನು ಪಾವತಿಸುವ ಸಂಬಂಧ ತಮ್ಮ ವ್ಯಾಪ್ತಿಯಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ತರಗತಿಗಳ ಮುಕ್ತಾಯ ದಿನಾಂಕದವರೆಗೆ ಮಾತ್ರ ಅನುದಾನದ ಮಾಹಿತಿಯನ್ನು ದಿನಾಂಕ:16.09.2023ರೊಳಗೆ ಈ ಕೆಳಕಂಡ ನಮೂನೆಯಲ್ಲಿ ಇ-ಮೇಲ್ ವಿಳಾಸ dcegfbudget@gmail.com ಕ್ಕೆ ಎಕ್ಸೆಲ್ ಫಾರ್ಮೆಟ್‌ನಲ್ಲಿ ಕಳುಹಿಸಿಕೊಡಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

---2

<u>ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ:</u>

| ಕ್ರ.ಸಂ | ಕಾಲೇಜಿನ ಹೆಸರು | ವಿಶ್ವವಿದ್ಯಾಲಯಗಳ ಪ್ರಕಾರ ತರಗತಿಯ ಮುಕ್ತಾಯದ ದಿನಾಂಕ | ಆಗಸ್ಟ್-2023ರ ಮಾಹೆಗೆ ಆವಶ್ಯಕವಾಗಿರುವ ಅನುದಾನದ ಮಾಹಿತಿ | ಕೆ-2 ರಲ್ಲಿ ವೆಚ್ಚವಾಗಿ ಉಳಿಕೆಯಾಗಿರುವ ಒಟ್ಟು ಅನುದಾನದ ಮಾಹಿತಿ | ಷರಾ |
|---|---|---|---|---|---|

<u>ಪ್ರತಿಯನ್ನು.</u>

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ,ಕೇಂದ್ರಕಛೇರಿ ವಿಭಾಗ,ಬೆಂಗಳೂರು-ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಕ್ತಕ್ರಮಕ್ಕಾಗಿ.

2. ಕಛೇರಿ ಪ್ರತಿ.